ನಾನು ಹೇಳುತ್ತೇನೆ. ತಕ್ಷಣ ಟೆಂಡರ್ ಕರೆಯುತ್ತೇವೆ. I told SP also. ಆ ತರಹ ಕಛೇರಿಗೆ ಬೀಗ ಹಾಕುವುದನ್ನು ಸರ್ಕಾರ ಸಹಿಸಿಕೊಳ್ಳುವುದಿಲ್ಲ. ಯಾರು ಗುತ್ತಿಗೆದಾರರು ಟೆಂಡರ್ ಹಾಕುವವರನ್ನು ತಡೆಹಿಡಿಯುತ್ತಾರೆ, ನಾವು ಅವರ ಮೇಲೆ ಕಾನೂನು ಕ್ರಮ ತೆಗೆದುಕೊಂಡು ಜೈಲು ಒಳಗಡೆ ಹಾಕಿಸುತ್ತೇವೆ. ಟೆಂಡರ್ ತೆಗೆದುಕೊಂಡು ಕೆಲಸ ಪ್ರಾರಂಭ ಮಾಡಬೇಕು. No question of piece-work business.

ಶ್ರೀ ಶ್ರೀರಂಗದೇವರಾಯಲು : ನಾನು ಕಾಡಾ ಸಚಿವನಾಗಿದ್ದಾಗ ನಮ್ಮ ಮುಖ್ಯ ಮಂತ್ರಿಯವರಿಗೆ ಕೆನಾಲ್ ಸಲುವಾಗಿ ಹಣವನ್ನು ಬಿಡುಗಡೆ ಮಾಡಬಾರದೆಂದು ಹೇಳಿದ್ದೆ. ಮೇ 10ನೇ ತಾರೀಖಿಗೆ ನೀರು ಕೊಟ್ಟಿದ್ದೇವೆ, 15 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಕ್ಕಾಗಿ ಮಾನ್ಯ ಸಚಿವರಿಗೆ ಅಭನಂದನೆಗಳನ್ನು ಸಲ್ಲಿಸುತ್ತೇನೆ.

ಉಪಾಧ್ಯಕ್ಷರು : ದಯಮಾಡಿ ಶ್ರೀರಂಗದೇವರಾಯಲು ಕುಳಿತುಕೊಳ್ಳಬೇಕು. ಸಚಿವರು ಉತ್ತರವನ್ನು ಕೊಟ್ಟಿದ್ದಾರೆ.

ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದದ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಉಪ ಮುಖ್ಯಮಂತ್ರಿಗಳು, ಮಂತ್ರಿಗಳಾಗುವುದಕ್ಕೆ ಮುಂಚೆ ಕನ್ನಡ ಕಾವಲು ಸಮಿತಿಯ ಅಧ್ಯಕ್ಷರಾಗಿದ್ದರು. ಕನ್ನಡಕ್ಕಾಗಿ ಸೇವೆ ಸಲ್ಲಿಸಿದ್ದಾರೆ ಅದಕ್ಕಾಗಿ ಸಂತೋಷ. ಈ ಸರೋಜಿನಿ ಮಹಿಷಿಯವರ ವರದಿ ಎಷ್ಟು ದಿವಸಗಳಿಂದ ಮೂಲೆಗೆ ಬಿದ್ದಿದೆ. ಅದನ್ನು ಜಾರಿಗೆ ತರಲಿಕ್ಕೆ ಸರ್ಕಾರಕ್ಕೆ ಇರತಕ್ಕಂಥ ಕಷ್ಟ ಏನು? ಆ ವರದಿ 1983ರಲ್ಲಿ ತಯಾರಾಗಿರತಕ್ಕಂಥದ್ದು 1998ರವರೆಗೆ ಆ ವರದಿಯ ಪರಿಸ್ಥಿತಿ ಏನಾಗಿದೆ? ಆ ವರದಿಯನ್ನು ಪ್ರಾಮಾಣಿಕವಾಗಿ ಒಪ್ಪುವುದಕ್ಕೆ ತಮಗೆ ಇರುವ ತೊಂದರೆಗಳು ಏನು? ಈಗಾಗಲೇ ಮಹಾರಾಷ್ಟ್ರದ ಮುಖ್ಯಮಂತ್ರಿಗಳಾದ ಶ್ರೀ ಮನೋಹರ ಜೋಷಿಯವರು ಕೇಂದ್ರಕ್ಕೆ ತಮ್ಮ ನಿಯೋಗವನ್ನು ಕರೆದುಕೊಂಡು ಹೋಗಿ, ಶರದ್ ಪವಾರ್‌ರವರ ಅಧ್ಯಕ್ಷತೆಯಲ್ಲಿ ಅನೇಕ ಮುಖಂಡರು ಹೋಗಿ ಗಡಿಯ ಸಮಸ್ಯೆಗೆ ಪರಿಹಾರ ಹುಡುಕುವುದಕ್ಕೆ ತಕ್ಷಣ ಇದರಲ್ಲಿ ಮಧ್ಯೆ ಪ್ರವೇಶ ಮಾಡಬೇಕೆಂದು ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದ್ದಾರೆ. ಮಹಾಜನ ವರದಿಯನ್ನು ಕೈಬಿಡಬೇಕೆಂದು ಹೇಳಿದ್ದಾರೆ. ನಮ್ಮ ಸರ್ಕಾರದ ವತಿಯಿಂದ ಮುಖ್ಯಮಂತ್ರಿಗಳು ಮತ್ತು ತಾವು ಹೋಗುತ್ತೀರಾ ಅಥವಾ ಒಂದು ನಿಯೋಗವನ್ನು ಕರೆದುಕೊಂಡು ಹೋಗಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುವ ವಿಚಾರವನ್ನು ಮಾಡಿದ್ದೀರಾ ಅಂತಹ ವಿಚಾರ ಏನಾದರೂ ಇದೆಯೇ.

4.10 ಪಿ.ಎಂ

ಅಥವಾ ಆಯೋಗವನ್ನು ಕರೆದುಕೊಂಡು ಹೋಗತಕ್ಕಂಥ ಯಾವುದಾದರೂ ಸೂಚನೆ ನಿಮ್ಮಲ್ಲಿದೆಯೇ ಎನ್ನತಕ್ಕಂಥಾದ್ದು ಎರಡನೇಯದು. ಮೂರನೇಯದು ಹೊರನಾಡು ಕನ್ನಡಿಗರು ಎಂದು ಏನಿದ್ದಾರೆ, ಕಾಸರಗೋಡು, ತಾಳವಾಡಿ, ಅಕ್ಕಲಕೋಟೆ, ಅದವಾನಿ ಇಲ್ಲಿ ಇಷ್ಟೆಲ್ಲಾ ತೊಂದರೆ ಇದೆ, ಅಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ ಅಲ್ಲಿ ಕನ್ನಡ ಶಾಲೆಗಳು ಇಲ್ಲ, ಕನ್ನಡ ಪಠ್ಯಪುಸ್ತಕಗಳು ಇಲ್ಲ.

ಮತ್ತು ಕನ್ನಡಿಗರಿಗೆ ಉದ್ಯೋಗ ಇಲ್ಲ. ಗಡಿಪ್ರದೇಶಗಳಲ್ಲಿ ಈ ಪರಿಸ್ಥಿತಿ ನಿರ್ಮಾಣವಾಗಿದೆ. ಸ್ವಲ್ಪ ಹೆಚ್ಚು ಕಡಿಮೆ ಸಾರಾಸಗಟಾಗಿ ಈ ವ್ಯವಸ್ತೆ ನಿರ್ಮಾಣವಾಗಿದೆ. ನಾಲ್ಕನೆಯದು, ಹೊಸ ಜಿಲ್ಲೆಗಳಿಗೆ .....

ಉಪಾಧ್ಯಕ್ಷರು : ಸಾಕು.

ಶ್ರೀ ವಾಟಾಳ್ ನಾಗರಾಜ್ : ಇವತ್ತು ತಾವು ಸಮಯ ಕೊಡುತ್ತಿದ್ದೀರಿ, ಒಂದೇ ನಿಮಿಷದಲ್ಲಿ ಹೇಳುತ್ತೇನೆ. ಹೊಸ ಜಿಲ್ಲೆಗಳ ಅಭಿವೃದ್ಧಿ ಬಗ್ಗೆ ಒಂದು ವಿಶೇಷವಾದಂಥ ಸಭೆಯನ್ನು ಕರೆದು ಏನೇನು ಅಭಿವೃದ್ಧಿಯಾಗಿದೆ ಎಂಬುದನ್ನು ತಾವು ನೋಡಬೇಕು. ಈ ನಾಲ್ಕರ ಬಗ್ಗೆ ತಾವು ಹೇಳಬೇಕು.

ಉಪಾಧ್ಯಕ್ಷರು : ಐದು-ಆರು-ಏಳು-ಎಂಟು ಎಂದು ತಾವು ಹೇಳಬೇಡಿ ಎಂದು ನಾನು ಹೇಳಿದೆ. ಇದು ಉಪಮುಖ್ಯಮಂತ್ರಿಗಳು, ತಾವು ಉತ್ತರ ಹೇಳಿಬಿಡಿ.

+ ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿ) : ಮಾನ್ಯ ಸಭಾಧ್ಯಕ್ಷರೇ, ನಾನು ಕನ್ನಡ ಕಾವಲು ಸಮಿತಿ ಅಧ್ಯಕ್ಷನಾಗಿದ್ದಾಗ ಕೂಡ ಇದನ್ನೆಲ್ಲಾ ಶಿಫಾರಸ್ಸು ಮಾಡಿದ್ದೇನೆ. ಕನ್ನಡ ಆಡಳಿತಭಾಷೆ ಈ ರಾಜ್ಯದಲ್ಲಿ ಆಗಲೇಬೇಕು. ಕನ್ನಡ ಆಡಳಿತ ಭಾಷೆಯಾಗಬೇಕಾದರೆ ಏನೆಲ್ಲ ಪೂರಕ ವ್ಯವಸ್ಥೆಯಾಗಬೇಕು, ಕಾರ್ಯಕ್ರಮಗಳನ್ನು ಮಾಡಬೇಕು ಎನ್ನುವುದರ ಬಗ್ಗೆ ಕೂಡ ನಾನು ಒಂದು ವರ್ಷದ ಅವಧಿಯಲ್ಲಿ ಅಧ್ಯಕ್ಷನಾಗಿದ್ದಾಗ ಬಹಳಷ್ಟು ಶಿಫಾರಸ್ಸುಗಳನ್ನು ಮಾಡಿದ್ದೇನೆ. ಈಗ ಸರೋಜಿನಿ ಮಹಿಷಿ ವರದಿಯನ್ನು ಈಗಾಗಲೇ ಜಾರಿಗೆ ಕೊಟ್ಟಿದ್ದೇವೆ. ಎಲ್ಲೆಲ್ಲಿ ಹೊಸ ಕೈಗಾರಿಕೆಗಳಿಗೆ ನಾವು ಪರವಾನಗಿ ಕೊಡುತ್ತೇವೆ, ಅದರಲ್ಲಿ ನಾವು ಇದನ್ನು ಸೇರಿಸುತ್ತೇವೆ. ಕನ್ನಡಿಗರಿಗೆ ಆದ್ಯತೆಯನ್ನು ಕೊಡಲೇಬೇಕು ಎನ್ನತಕ್ಕಂಥಾದ್ದನ್ನು ಹೇಳಿದ್ದೇವೆ. ಇಲ್ಲದೇ ಹೋದರೆ ನಾವು ಕೊಡತಕ್ಕಂಥ ಅನೇಕ ಇನ್ಸೆಂಟೀವ್ಸನ್ನು ನಿಲ್ಲಿಸುತ್ತೇವೆ ಎಂದೂ ಕೂಡ ಹೇಳಿದ್ದೇವೆ. ಅದನ್ನು ನಾವು ಕೊಡುವ ಪರವಾನಗಿಯಲ್ಲೇ ಸೇರಿಸಿದ್ದೇವೆ. ಸರೋಜಿನಿ ಮಹಿಷಿ ವರದಿಯ ಪ್ರಕಾರ ತಾಂತ್ರಿಕ ಹುದ್ದೆಗಳಿಗೆ ಕೂಡ ಕರ್ನಾಟಕದಲ್ಲಿ ಅರ್ಹತೆ ಇರುವ ಕನ್ನಡಿಗರನ್ನೇ ತೆಗೆದುಕೊಳ್ಳಬೇಕು. ಒಂದುವೇಳೆ ಸಿಗದೇಹೋದರೆ ಮಾತ್ರ ಅಂತಹ ಪೋಸ್ಟ್ ಗಳನ್ನು ಬೇರೆಯವರಿಗೆ ಕೊಟ್ಟು ಭರ್ತಿ ಮಾಡಿಕೊಳ್ಳಬಹುದೇ ಹೊರತಾಗಿ ಉಳಿದ ಎಲ್ಲಾ ಪೋಸ್ಟ್‌ಗಳಿಗೂ ಕೂಡ ಕನ್ನಡಿಗರನ್ನೇ ತೆಗೆದುಕೊಳ್ಳಬೇಕು ಎಂದು ಸರೋಜಿನಿ ಮಹಿಷಿ ವರದಿಯ ಪ್ರಕಾರ ಆ ಶಿಫಾರಸ್ಸಿಗೆ ಅನುಗುಣವಾಗಿ ನಾವು ಹೊಸ ಯಾವುದೇ ಕೈಗಾರಿಕೆಗಳಿಗೆ, ಅದು ದೊಡ್ಡ ಕೈಗಾರಿಕೆ ಇರಬಹುದು, ಮಧ್ಯಮವರ್ಗದ ಕೈಗಾರಿಕೆಗಳು ಇರಬಹುದು, ಯಾವುದೇ ಕೈಗಾರಿಕೆಗಳು ಇರಬಹುದು ಈ ಶಿಫಾರಸ್ಸನ್ನು ಸೇರಿಸಿಯೇ ನಾವು ಪರವಾನಗಿಯನ್ನು ಕೊಡುತ್ತಿದ್ದೇವೆ. ಆದ್ದರಿಂದ ಇದನ್ನು ಜಾರಿಗೆ ತರತಕ್ಕಂಥ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಅಲ್ಲಿ ಇಲ್ಲಿ ಹಿಂದೆ ಪ್ರಾರಂಭವಾಗಿದ್ದಂಥ ಕಾರ್ಖಾನೆಗಳಲ್ಲಿ ಆಗಿರಬಹುದು. ಈಗ ಹೊಸದಾಗಿ ಪ್ರಾರಂಭವಾದ ಕಾರ್ಖಾನೆಗಳಲ್ಲಿ ಹಾಗೆ ಆಗಿಲ್ಲ. ಕೆಲವು ಕಡೆ ಕನ್ನಡಿಗರನ್ನು ಬಿಟ್ಟು ಬೇರೆಯವರನ್ನು ತೆಗೆದುಕೊಂಡಿರತಕ್ಕಂಥ ನಿದರ್ಶನಗಳು ಇವೆ. ಆದರೂ ಕೂಡ ಈಗ ಹೊಸದಾಗಿ ಆಗತಕ್ಕಂಥ ಎಲ್ಲಾ ಕಾರ್ಖಾನೆಗಳಲ್ಲಿ ಕಟ್ಟುನಿಟ್ಟಾಗಿ ಇದನ್ನು ಮಾಡಲೇಬೇಕು ಎಂದು ಬರವಣಿಗೆಯಲ್ಲಿ ಇದನ್ನೆಲ್ಲಾ ಸೇರಿಸುತ್ತಿದ್ದೇವೆ. ಇದು ಒಂದು. ಎರಡನೇಯದು ಪವಾರ್‌ರವರು ಹೋಗುತ್ತಿದ್ದಾರೆ ಎಂದು ಹೇಳಿದ್ದಾರೆ. ನಮ್ಮದು ಬಹಳ ಸ್ಪಷ್ಟವಾಗಿದೆ. ಮಹಾಜನ ವರದಿಯೇ ಅಂತಿಮ. ಇದರ ಬಗ್ಗೆ

ಯಾವುದೇ ಚರ್ಚೆ ಇಲ್ಲ, ಅದನ್ನು ಹಿಂದುಮುಂದೆ ಮಾಡತಕ್ಕಂಥ ಪ್ರಶ್ನೆಯೇ ಇಲ್ಲ. ಅದಕ್ಕೆ ನಾವು ಬದ್ಧರಾಗಿದ್ದೇವೆ ಮತ್ತು ಸರ್ಕಾರದ ನಿಲುವು ಇದರ ಬಗ್ಗೆ ಸ್ಪಷ್ಟವಾಗಿದೆ. ಏನೇ ಮಾತನಾಡಿದರೂ ಕೂಡ ಅದಕ್ಕೆ ಅನುಗುಣವಾಗಿ ಮಾತನಾಡಬೇಕೇ ಹೊರತು ಬೇರೆ ವಿಚಾರ ಇಲ್ಲ. ಒಂದು ವೇಳೆ ಆ ತರಹ ಪರಿಸ್ಥಿತಿ ಬಂದರೆ ಮುಖ್ಯಮಂತ್ರಿಗಳು ಅಥವಾ ವಿರೋಧ ಪಕ್ಷಗಳ ಮುಖಂಡರನ್ನು ಕರೆದುಕೊಂಡು ಹೋಗತಕ್ಕಂಥ ಪರಿಸ್ಥಿತಿ ಉದ್ಭವವಾದರೆ ಕರೆದುಕೊಂಡು ಹೋಗತಕ್ಕಂಥ ಕೆಲಸವನ್ನು ಮಾಡಿ ಚರ್ಚೆ ಮಾಡತಕ್ಕಂಥಾದ್ದು ಮಾಡುತ್ತೇವೆ. ಮಹಾಜನ ವರದಿಯನ್ನು ನಾವು ಒಪ್ಪಿಕೊಂಡಿದ್ದೇವೆ. ಅದು ನಮಗೆ ಬಹಳ ಅನಾನುಕೂಲತೆಗಳು ಇದ್ದರೂ ಕೂಡ ಅದನ್ನು ಒಪ್ಪಿಕೊಂಡಿದ್ದೇವೆ. ಎಂದು ಹೇಳಿದ್ದೇವೆ, ಇದೇ ಅಂತಿಮ ಎಂದು ಹೇಳಿದ್ದೇವೆ. ಇದರ ಬಗ್ಗೆ ಯಾವುದೇ ರಾಜಿ ಇಲ್ಲ ಎನ್ನತಕ್ಕಂಥಾದ್ದನ್ನು ಕೂಡ ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತೇನೆ. ಹೊಸ ಜಿಲ್ಲೆಗಳ ಬಗ್ಗೆ, ಅವುಗಳ ಅಭಿವೃದ್ಧಿ ಬಗ್ಗೆ ನಾನು ಹೇಳಿದ್ದೇನೆ. ಈಗಾಗಲೇ ಜಿಲ್ಲಾ ಪಂಚಾಯತ್‌ನಲ್ಲಿ ಎಷ್ಟು ಹಣ ಹೋಗಬೇಕು ಎಂದು ಈಗಾಗಲೇ ಕೊಡತಕ್ಕಂಥ ಕೆಲಸ ಮಾಡಿದ್ದೇವೆ. ಅಧಿಕಾರಿಗಳನ್ನು ನೇಮಕ ಮಾಡುತ್ತಿದ್ದೇವೆ, ಹೊಸ ಕಟ್ಟಡಗಳು ಆಗಿದೆ ಮತ್ತು ಅದಕ್ಕೆ ಸ್ವಲ್ಪ ಹಣ ಇಟ್ಟಿದ್ದೇವೆ. ಇದು ಹಂತ ಹಂತವಾಗಿ ಕೊಡತಕ್ಕಂಥ ಕೆಲಸ ಮಾಡುತ್ತೇವೆ. ಈ ಜಿಲ್ಲಾ ಪಂಚಾಯತ್‌ಗಳಿಗೆ ಕೂಡ ಬೇಕಾದಂಥ ಹಣದ ಬಗ್ಗೆ, ವಿಭಜನೆಯಾದ ಮೇಲೆ ಅದಕ್ಕೆ ಅನುಗುಣವಾಗಿ ಎಷ್ಟು ತಾಲ್ಲೂಕುಗಳು ಬರುತ್ತದೆ. ಅದಕ್ಕೆ ಅನುಗುಣವಾಗಿ, ಅಲ್ಲಿರತಕ್ಕಂಥ ಜನಸಂಖ್ಯೆ, ಅಲ್ಲಿರತಕ್ಕಂಥ ಕೃಷಿ ಕಾರ್ಮಿಕರು ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಅದನ್ನು ಹಂಚಿಕೆ ಮಾಡತಕ್ಕಂಥ ಕೆಲಸವನ್ನು ಮಾಡುತ್ತಿದ್ದೇವೆ. ಬೇರೆ ಅಭಿವೃದ್ಧಿ ಕೆಲಸ ಕೂಡ ಮಾಡುತ್ತಿದ್ದೇವೆ. ಅಗತ್ಯಬಿದ್ದರೆ ಮೀಟಿಂಗ್ ಕರೆದು ಬೇಕಾದರೆ ಚರ್ಚೆ ಮಾಡೋಣ. ಹೊರನಾಡು ಕನ್ನಡಿಗರ ಬಗ್ಗೆ ಈಗಾಗಲೇ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಇದು ಹೆಚ್ಚು ವ್ಯಾಪಕವಾಗಿ ಆಗಬೇಕು ಅದರ ಬಗ್ಗೆ ಪ್ರಯತ್ನ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ಕೇರಳ, ತಮಿಳುನಾಡು ಜತೆಯಲ್ಲಿ ಆ ಗಡಿಗಳ ಬಗ್ಗೆ ಮಾತನಾಡಿ.

ಶ್ರೀ ಸಿದ್ಧರಾಮಯ್ಯ : ಅಲ್ಲಿ ಕನ್ನಡಿಗರಿಗೆ ಕಲಿಯುವುದಕ್ಕೆ, ಬೇರೆ ಬೇರೆ ಸೌಲಭ್ಯಗಳನ್ನು ಕಲ್ಪಿಸಿಕೊಡುವುದಕ್ಕೆ ನಾವು ನಮ್ಮ ಬಾರ್ಡರ್ ಭಾಗದಲ್ಲಿ ಮಾಡಿದ್ದೇವೆ. ಅವರೂ ಕೂಡ ಮಾಡಬೇಕು ಎಂಬುದರ ಬಗ್ಗೆ ಮಾತುಕತೆಯಾಡಲು ಪ್ರಯತ್ನ ಮಾಡುತ್ತೇವೆ.

ಜೀವ ವೈವಿಧ್ಯತಾ ದಾಖಲಾತಿಯನ್ನು ಮಾಡುವ ಬಗ್ಗೆ

ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲಾ) : ಮಾನ್ಯ ಅಧ್ಯಕ್ಷರೇ, ಇದು ನಿಜವಾಗಿಯೂ ಶೂನ್ಯವೇಳೆಯಲ್ಲಿ ಎತ್ತುವ ವಿಷಯ ಅಲ್ಲ. ಅರ್ಧಗಂಟೆ ಚರ್ಚೆ ಅಥವಾ ವಿಶೇಷವಾಗಿ ಚರ್ಚೆ ಮಾಡತಕ್ಕಂಥ ವಿಷಯ. ಸದನ ಇವತ್ತು ಮುಗಿಯುತ್ತಿರುವುದರಿಂದ ಶೂನ್ಯವೇಳೆಯಲ್ಲಿ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಮಾನ್ಯ ಆರೋಗ್ಯ ಸಚಿವರು, ಕೃಷಿ ಸಚಿವರು, ಶಿಕ್ಷಣ ಸಚಿವರು ವಿಶೇಷವಾಗಿ